ನಡೆದಿತ್ತು. ಅದರ ಮುಂದಾಳತ್ವ ಮಹಾನಾಯಕ ಯುವಕ ಸಂಘದ ಹುಡುಗರ ಜೊತೆಗೆ ಮಂಜಣ್ಣನೂ ವಹಿಸಿದ್ದ. 'ನಾವು ನಿಮ್ಮಂಗೆ ದೇವರ ಕಾರ್ಯಕ್ಕೆ ದುಡ್ಡು ಹಾಕಿದಿವಿ, ನಾವೂ ಹಿಟ್ನಾರ್ತಿ ತಿರುಗುಸ್ತೀವಿ' ಅಂತ ಕೇಳಿದ್ದರು. 'ನಮ್ಮ ಜೊತೆಗೆ ಬೇಡ, ಎಲ್ಲ ಕಂಡ್ಲಮಂಡ್ಲ ಆಗುತ್ತೆ. ಊರಾಗಳೋರು ತಿರುಗಿದ ಮೇಲೆ ನೀವು ತಿರುಗ್ರಿ' ಅಂತ ಹೇಳಿದ್ದರು. ಅದಕ್ಕೆ ಒಪ್ಪದ ಮಣೆಗಾರರು ಹಿಟ್ನಾರ್ತಿ ಜ್ಯೋತಿ ತಿರುಗಿಸೋದೆ ಬೇಡಾಂತ ಸುಮ್ಮನಾಗಿದ್ದರು. ಆ ಕಳಸ ಪ್ರತಿಷ್ಠಾಪನೆ ಕಾರ್ಯದಲ್ಲಿ ಹೊಸ ತಲೆಮಾರಿನ ಹುಡುಗರು ಯಾರೂ ಭಾಗಿಯಾಗಿರಲಿಲ್ಲ. ಹಳೆ ತಲೆಮಾರಿನ ಕರಿಯಣ್ಣನಂಥ ಒಂದಿಬ್ಬರು ಮುದುಕರು ಎಟ್ಟಿಚಾಕರಿ ಮಾಡೋಕೆ ಹೋಗಿದ್ದರು.

ಆಗಿನಿಂದ ಊರಾಗಳೋರು ಮಣೆಗಾರರ ಮೇಲೆ ಮುನಿಸಿಕೊಂಡಿದ್ದರು. ಅದಾಗಿ ಎರಡು ವಾರದೊಳಗೆ ಮಂಜಣ್ಣನ ತಂದೆ ಗಿಡ್ಡಹನುಮಪ್ಪ ಮೆತ್ತಗಾಗಿದ್ದರಿಂದ ಕಣ್ಮುಚ್ಚಿದ್ದ. ಮಣ್ಣು ಮಾಡಿ ಬಂದಮೇಲೆ ಮೂರು ದಿನದ ಹಿಂಡುಕೂಳು ಹಾಕಿಕೊಳ್ಳುವಾಗ ಅವರ ಸಂಪ್ರದಾಯದಂತೆ ತನ್ನ ತಂದೆ ಪ್ರಾಣಬಿಟ್ಟ ಜಾಗದಲ್ಲಿ ರಕ್ತದ ಮುಖ ಮಾಡಬೇಕಾಗಿತ್ತು. ಜೊತೆಗೆ ಎಡೆ ಹಾಕೋಕೆ ಮಾಂಸದ ಸಾರು ಬೇಕೇ ಬೇಕೆಂದು ಹಟ್ಟಿಯ ಯಜಮಾನರ ಜೊತೆಗೆ ಭಜನೆಯವರು ಹೇಳಿದ್ದರಿಂದ ನಾಕು ನಾಟಿಕೋಳಿ ತಂದು ತನ್ನ ಕಾರ್ಯೇವು ಪೂರೈಸಿಕೊಂಡಿದ್ದ. ಅದು ಊರಿನ ಯಜಮಾರಿಗೆ ಗೊತ್ತಾಗಿ, ಮಂಜಣ್ಣನ್ನ ಬಗ್ಗಿ ಬಡಿಯೋಕೆ ಇದೇ ಸರಿಯಾದ ಸಮಯವೆಂದುಕೊಂಡು ಪಂಚಾಯ್ತಿ ಕರೆದಿದ್ದರು.

ಇದನ್ನ ಹಿಂಗೆ ಸಡಿಲ ಬಿಟ್ರೆ ಇವನನ್ನು ನೋಡಿ ನಾಳೆ ಉಳಿದವರು ಇದೇ ಕಲಿತಾರೆ. ಆಗ ನಮ್ಮ ಮಾತಿಗೆ ಕಿಮ್ಮತ್ತೆ ಇಲ್ದಂಗಾಗುತ್ತೆ. ಏನಾದ್ರು ಆಗಲಿ ಇವತ್ತೊಂದು ತೀರ್ಮಾನ ಆಗಲೇಬೇಕೆಂದು ಪಂಚಾಯ್ತಿ ಯಜಮಾನರು ಊಕುರುಸ್ತಾ ಇದ್ರು. ಮಂಜಣ್ಣ ಬರುವಷ್ಟೊತ್ತಿಗೆ ಪಂಚಾಯ್ತಿಕಟ್ಟೆ ಸುತ್ತ ಜನ ಜಮಾಯಿಸಿದ್ದರಿಂದ ಅಲ್ಲಿನ ವಾತಾವರಣ ಬೂದಿಮುಚ್ಚಿದ ಕೆಂಡದಂತಿತ್ತು. ನೆರೆದಿರುವ ಜನರಿಗೆ ಗದ್ದಲ ಮಾಡಬಾರದಂತ ಕೈ ಸನ್ನೆ ಮಾಡಿದ ಮಲ್ಲಪ್ಪ ಪಂಚಾಯ್ತಿ ಶುರು ಮಾಡಲು ಗೋವಿಂದಪ್ಪನಿಗೆ ಹೇಳಿದ. ಆಗ ಗೋವಿಂದಪ್ಪ, 'ಏನೊ ಮಂಜ, ನೀನು ಮಾಡಿದ್ದು ಸರಿಯೇನೊ?' ಅಂತ ಸೆಡವಿನಿಂದ ಪ್ರಶ್ನಿಸಿದ. 'ನಾನೇನು ಮಾಡಿದೆ ಗೋವಿಂದಣ್ಣ?' ಅಂತೇಳಿ ಮಂಜಣ್ಣ ತಣ್ಣನೆಯ ದನಿಯಲ್ಲಿ ಕೇಳಿದ. ಆ ಮಾತಿಗೆ ಪಿತ್ತನೆತ್ತಿಗೇರಿಸಿಕೊಂಡ ಮಲ್ಲಪ್ಪ, 'ನಾವು ಲಕ್ಷಾನುಗಟ್ಲೆ ಖರ್ಚುಮಾಡಿ ಕಳಸ ಪ್ರತಿಷ್ಠಾಪನೆ ಜೊತೆಗೆ ಹೋಮ ಸುಡಿಸಿದ್ದರಿಂದ ನಲವತ್ತು ದಿನ ಊರಲ್ಲಿ ಯಾರೂ ಮಾಂಸದ ಅಡುಗೆ ಮಾಡಬಾರದಂತ ಹೇಳಿರಲಿಲ್ವೇನೊ?" ಕಣ್ಣು ಕೆಂಪಗೆ ಮಾಡಿಕೊಂಡು ಕೇಳಿದ್ದ.

'ಊರಲ್ಲಿ ಮಾಡಬಾರದಂತ ಹೇಳಿದ್ರೆ ವಿನಾ ಕೇರಿಯಲ್ಲಿ ಮಾಡಬಾರದಂತ ಹೇಳಿಲ್ವಲ್ಲಣ್ಣ?' ಮಂಜಣ್ಣ ಪಂಚಾಯ್ತಿದಾರರ ನೆತ್ತಿಕೂದ್ಲು ಸುಳಿದಿರುಗಂಗೆ ಮಾತಾಡಿದ. ಆ ಮಾತಿಗೆ ಮತ್ತಷ್ಟು ಕುಪಿತನಾದ ಮಲ್ಲಪ್ಪ, 'ಹಂಗಾದ್ರೆ ಊರು ಬೇರೆ, ಕೇರಿ ಬೇರೆಯೇನೊ' ಎಂದು ಕೇಳಿದ. 'ಅದು ನಿನ್ನ ಮನಸಿಗೆ ನೀನೆ ಕೇಳ್ಕೊಬೇಕು ಮಲ್ಲಣ್ಣ' ಎಂದು ನಿರುದ್ವೇಗದ ದನಿಯಲ್ಲಿ ಹೇಳಿದಾಗ ಪಂಚಾಯ್ತಿ ಮತ್ತಷ್ಟು ಬಿಗಡಾಯಿಸಿತು. 'ಊರಿನ ನಿಯಮ ಉಲ್ಲಂಘಿಸಿ ಕಂಡ್ಲಮಂಡ್ಲ ಮಾಡಿದ್ದಲ್ದೆ, ಪಂಚಾಯ್ತಿದಾರರಿಗೆ ಎದುರು ಮಾತಾಡ್ತಿಯೇನೊ ಬೋಸುಡಿಕೆ' ಅಂತೇಳಿ ಗೋವಿಂದಪ್ಪ ಬಾಯಿಜಾರಿ ಮಾತಾಡಿಯೇ ಬಿಟ್ಟ. ಅಲ್ಲಿಯತನಕ ಸಮಾಧಾನವಾಗಿದ್ದ ಮಂಜಣ್ಣ, 'ಊರಿನ ಯಜಮಾನರು ಪಂಚಾಯ್ತಿ ಕರೆದಿದಾರೆ ಅಂತ ಮರ್ಯಾದೆ ಕೊಟ್ಟು ಬಂದ್ರೆ ಬಾಯಿಗೆ ಬಂದಂಗೆ ಮಾತಾಡ್ತೀಯ. ನಾಲಿಗೆ ಮೇಲೆ ಹಿಡಿತ ಇರ್ಲಿ ಗೋವಿಂದಣ್ಣ. ಅಷ್ಟಕ್ಕು ನಾನು ಉಣ್ಣೋ ತಟ್ಟೆಯಲ್ಲಿನ ಊಟ ಇಂಥಾದ್ದೇ ಇರಬೇಕಂತ ತೀರ್ಮಾನ ಮಾಡೋಕೆ ನೀವ್ಯಾರು? ಈಗ ಮೂರುದಿನದ ಹಿಂಡುಕೂಳಿಗೆ ನಾಕು ನಾಟಿಕೋಳಿ ಕೊಯ್ದಿದಿನಿ. ಹದಿನಾರು ದಿನದ ದೊಡ್ಡದಿವಸದ ಕಾರ್ಯೇವುಕ್ಕೆ ಬಾಡೂಟಾನೇ ಹಾಕುಸ್ತೀನಿ. ಅದೇನು ಮಾಡಿಕೊಳ್ತೀರೊ ಮಾಡ್ಕ್ಯ ಹೋಗ್ರಿ' ಎಂದು ಸಿಟ್ಟಾದ ಮಂಜಣ್ಣ ಹೆಗಲ ಮೇಲಿನ ಟವಲ್ ಕೊಡವಿ ಮನೆಕಡೆ ಹೊರಟೇ ಬಿಟ್ಟ. ಅದೇ ಹೊತ್ತಿಗೆ ಸೈರನ್ ಮಾಡ್ತ ಪಂಚಾಯ್ತಿಕಟ್ಟೆ ಹತ್ತಿರ ಪೊಲೀಸ್ ಜೀಪು ಬಂದಿದ್ದು ನೋಡಿ ಎಲೆತೋಟದ ಮಲ್ಲಪ್ಪ ಮೀಸೆಮರೆಯಲ್ಲಿ ನಗುತಿದ್ದ.

●